2017 ಕ.ತೀ.ವ 792

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

### ಶ್ರೀಮತಿ ವಿಶಾಲಾಕ್ಷಿ ಭಟ್ -ವಿರುದ್ಧ- ಕರ್ನಾಟಕ ಸರ್ಕಾರ (ಸಾಗರ ಪಟ್ಟಣ ಪೋಲೀಸ್ ಠಾಣೆ ಮೂಲಕ) ಮತ್ತು ಇನ್ನೊಬ್ಬರು*

**ದಂಡ ಪ್ರಕ್ರಿಯಾ ಸಂಹಿತೆ ಕಲಂ 482 ರಡಿಯಲ್ಲಿ ಕ್ರಿಮಿನಲ್ ಅರ್ಜಿಗಳು.**

**ಐಪಿಸಿ ಸೆಕ್ಷನ್ ಕಲಂ 406,420, 34,120-ಬಿ, 409, 418, 468, 471**

**ಭಾರತ ದಂಡ ಸಂಹಿತೆ ಕಲಂ 34, 120-ಬಿ, 409, 418, 468, 471, 406, 420 ರಡಿಯಲ್ಲಿ ಸಲ್ಲಿಸಿದ ವಿವಿಧ ಫಿರ್ಯಾದುಗಳನ್ನು ರದ್ದುಗೊಳಿಸುವಂತೆ ಕೋರಿ ಸದರಿ ಅರ್ಜಿ.**

**ಸದರಿ ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ಸಲ್ಲಿಸಿದ ದೋಷಾರೋಪಣಾ ಪಟ್ಟಿಯು ನಂತರ ಸಲ್ಲಿಸಿದ ದೋಷಾರೋಪಣಾ ಪಟ್ಟಿಗಿಂತ ಪ್ರಭಾವವುಳ್ಳದ್ದಾಗಿರುತ್ತದೆ. ನಂತರ ಸಲ್ಲಿಸಿದ ದೋಷಾರೋಪಣಾ ಪಟ್ಟಿಗಳು ಪೂರಕವಾದ ದೋಷಾರೋಪಣಾ ಪಟ್ಟಿಯೆಂದು ಪರಿಗಣಿಸಬೇಕೆಂದು ಹಾಗೆಯೇ ಮೊದಲ ಪ್ರಥಮ ವರ್ತಮಾನ ವರದಿಯ ನಂತರ ಸಲ್ಲಿಸಿದ ಪ್ರಥಮ ವರ್ತಮಾನ ವರದಿಗಳನ್ನು ಹೆಚ್ಚುವರಿ ಹೇಳಿಕೆಗಳೆಂದು ಪರಿಗಣಿಸಬೇಕೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಅದರಂತೆ ಸದರಿ ಅರ್ಜಿಗಳನ್ನು ವಿಲೇಖಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

1. *(2001) 6 ಎಸ್‌ಸಿಸಿ 181*
*ಟಿ.ಟಿ. ಆಂಟೋನಿ -ವಿರುದ್ಧ-*
*ಕೇರಳ ಸರ್ಕಾರ ಮತ್ತು ಇತರರು* *(ಉಲ್ಲೇ) 4*

*ಕ್ರಿಮಿನಲ್ ಅರ್ಜಿ ಸಂಖ್ಯೆ: 8703/2016, ದಿನಾಂಕ: 11ನೇ ಜನವರಿ, 2017.

2. *(2013) 6 ಎಸ್‌ಸಿಸಿ 348*
*ಅಮಿತ್‌ಭಾಯ್ ಅನಿಲ್ ಚಂದ್ರ ಷಾ -ವಿರುದ್ಧ- ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ ಹಾಗೂ ಮತ್ತೊಬ್ಬರು* *(ಉಲ್ಲೇ) 4*
3. *2012(3) ಕೆಸಿಸಿಆರ್ 1734*
*ನಿಂಗಪ್ಪ ಪರಸಪ್ಪ ಪೂಜಾರಿ ಹಾಗೂ ಇತರರು -ವಿರುದ್ಧ- ಕರ್ನಾಟಕ ಸರ್ಕಾರ.* *(ಉಲ್ಲೇ) 4*
4. *ಕ್ರಿ ಅ.ಸಂ. 201108/2014, ದಿನಾಂಕ 5-3-2015*
*ಮಲ್ಲು -ವಿರುದ್ಧ- ಕರ್ನಾಟಕ ರಾಜ್ಯ* *(ಉಲ್ಲೇ) 4*

ಅರ್ಜಿದಾರರ ಪರ: ಶ್ರೀ ಅಮರ್ ಕೊರಿಯಾ, ವಕೀಲರು
ಪ್ರತ್ಯರ್ಜಿದಾರರ ಪರ : ಶ್ರೀ ಬಿ. ವಿಶ್ವೇಶ್ವರಯ್ಯ, ಹೆಚ್‌ಸಿಜಿಪಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ:**

ಈ ಅರ್ಜಿಗಳು ಇತ್ಯರ್ಥಗೊಂಡ ಕಾನೂನಿನ ಹಂತದಲ್ಲಿರುವುದರಿಂದ ಅರ್ಜಿಗಳನ್ನು ಅಂಗೀಕಾರದ ಹಂತದಲ್ಲಿಯೇ ಸುನಾವಣೆ ಮಾಡಿ, ವಿಲೇ ಮಾಡಲಾಗಿರುತ್ತದೆ.

2. ಕ್ರಿಮಿನಲ್ ಅರ್ಜಿ ಸಂಖ್ಯೆ 8703/2016ರಲ್ಲಿ ಹೇಳಿರುವಂತಹ ವಾಸ್ತವಾಂಶಗಳ ಪ್ರಕಾರ , ಅರ್ಜಿದಾರರು, ಹೆಚ್‌ಡಿಎಫ್‌ಸಿ ಲೈಫ್ ಇನ್‌ಶೂರೆನ್ಸ್, ಬಿ.ಟಿ.ಎಂ.ಶಾಖೆ, ಬೆಂಗಳೂರು ಇಲ್ಲಿ ಶಾಖಾ ವ್ಯವಸ್ಥಾಪಕರಾಗಿರುತ್ತಾರೆ. 2015ರ ಜುಲೈ ತಿಂಗಳಿನಲ್ಲಿ ಬ್ಯಾಂಕಿನಿಂದ ಒಂದು ಯೋಜನೆಯು ಆರಂಭಗೊಂಡಿದ್ದು, ಅದರ ಮೂಲಕ, ಠೇವಣಿ ಹಣವನ್ನು 2 ರಿಂದ 3 ತಿಂಗಳುಗಳ ಅವಧಿಯಲ್ಲಿ ಹೂಡಿಕೆ ಮಾಡಿದಲ್ಲಿ, ಶೇಕಡಾ 10ರಷ್ಟು ಅಷೂರ್ಡ್ ಬಡ್ಡಿ ನೀಡುವುದಾಗಿ ತಿಳಿಸಿರುತ್ತಾರೆಂಬುದು

ವಾಸ್ತವಾಂಶಗಳಾಗಿದ್ದು, ಅಲ್ಲದೆ, ಅರ್ಜಿದಾರರು, ಒಬ್ಬ ಸಾಮಾನ್ಯ ವ್ಯಕ್ತಿ ಹಣವನ್ನು ಠೇವಣಿ ಮಾಡುವುದಕ್ಕೆ ಬದಲಾಗಿ, ಪ್ರತ್ಯರ್ಜಿದಾರಳಂಥ ಬ್ಯಾಂಕಿನ ಉದ್ಯೋಗಿಗಳು ಹಣವನ್ನು ಠೇವಣಿ ಮಾಡಿದಲ್ಲಿ ಬಡ್ಡಿಯ ಮೊತ್ತವು ಹೆಚ್ಚಿನದಾಗಿದ್ದು, ತನ್ನ ಹೆಸರಿನಲ್ಲಿ ಠೇವಣಿ ಮಾಡಿರೆಂದು ಅರ್ಜಿದಾರರ ಸಂಬಂಧಿಯಾಗಿದ್ದ ಈಕೆ ಸೂಚಿಸಿದರೆಂದೂ ಸಹ ಆಪಾದಿಸಿರುತ್ತಾರೆ. ಪ್ರತ್ಯರ್ಜಿದಾರರು ಹೇಳಿದಂತೆ ಬಡ್ಡಿಯೊಂದಿಗೆ 2015ರ ಅಕ್ಟೋಬರ್ ವೇಳೆಗೆ ಮರುಪಾವತಿಸಲಾಗುತ್ತದೆಂಬ ಭರವಸೆಯ ಮೇಲೆ ತನ್ನ ಪತ್ನಿಗೆ ಸೇರಿದ 10 ಲಕ್ಷರೂ.ಗಳನ್ನು ಒಳಗೊಂಡಂತೆ ಒಟ್ಟು 36 ಲಕ್ಷ ರೂಪಾಯಿಗಳ ಠೇವಣಿ ಮಾಡಲಾಗಿರುತ್ತದೆ. ನಂತರ, ಅರ್ಜಿದಾರರು ತಮ್ಮ ಮಾತನ್ನು ಉಳಿಸಿಕೊಂಡಿಲ್ಲ ಹಾಗೂ ಹಣವನ್ನು ಹಿಂತಿರುಗಿಸಿಲ್ಲ ಎಂಬುದು ತಿಳಿದು ಬಂದಿರುತ್ತದೆ. ಅಲ್ಲದೆ ಅರ್ಜಿದಾರಳು ತನ್ನ ಸೆಲ್ ಫೋನ್ ಅನ್ನು ಸ್ವಿಚ್ ಆಫ್ ಮಾಡಿಕೊಂಡು, ಯಾರೂ ಪತ್ತೆಹಚ್ಚಬಾರದ ರೀತಿಯಲ್ಲಿ ಸಂಪರ್ಕ ಕಡಿತಗೊಳಿಸಿಕೊಂಡಿದ್ದಳು. ಆ ತರುವಾಯ, ಪ್ರತ್ಯರ್ಜಿದಾರ ಸಂಖ್ಯೆ. 2ನೇ ಅರ್ಜಿದಾರಳ ಬಗ್ಗೆ ವಿಚಾರಿಸಿದಾಗ, ಅರ್ಜಿದಾರಳು, ಇಂತದೇ ವ್ಯವಹರಣೆಗಳಲ್ಲಿ ಆಕೆಯ ಸ್ನೇಹಿತರು ಹಾಗೂ ಸಂಬಂಧಿಗಳನ್ನು ಒಳಗೊಂಡಂತೆ ಅಸಂಖ್ಯಾತರನ್ನು ಮೋಸಗೊಳಿಸಿ, ಬಗೆಬಗೆಯಾಗಿ ಹಲವಾರು ಪ್ರಕರಣಗಳಲ್ಲಿ, ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಠೇವಣಿ ಮಾಡಿಸಿದ್ದರೆ, ಬಹುತೇಕ ಪ್ರಕರಣಗಳಲ್ಲಿ ಅರ್ಜಿದಾರಳು ತನ್ನ ಹೆಸರಿನಲ್ಲಿಯೇ ಠೇವಣಿ ಮಾಡಿಸಿರುತ್ತಾಳೆ. ಇಂಥ ಠೇವಣಿಯ ಮೊಬಲಗು 3.40 ಕೋಟಿ ರೂ.ಗಳನ್ನು ಮೀರಿದ್ದು, ಇದು ಸಂಬಂಧಪಟ್ಟ ಅರ್ಜಿಗಳ ವಸ್ತುವಿಷಯವಾಗಿರುತ್ತದೆ.

3. ಇಲ್ಲಿನ ಎರಡನೇ ಪ್ರತ್ಯರ್ಜಿದಾರರ ಸಂದರ್ಭದಲ್ಲಿ, ಪ್ರಕರಣವನ್ನು ನೋಂದಾಯಿಸಲಾಗಿರುತ್ತದೆ. ಹಾಗೂ ತನಿಖೆಯ ತರುವಾಯ ಆರೋಪಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಈಗ ಪ್ರಕರಣವು ಸಿ.ಸಿ.ಸಂಖ್ಯೆ 515/2016ರಲ್ಲಿ ಇತ್ಯರ್ಥದ ಹಂತದಲ್ಲಿರುತ್ತದೆ. ಈ ಪ್ರಕರಣಕ್ಕೆ ಮೊದಲೂ ಕೂಡ, ಇಂಥದೇ ವಾದಗಳನ್ನು ಕುರಿತಂತೆ ಅಪರಾಧ ಸಂಖ್ಯೆ 752/2015ರಲ್ಲಿ ಮತ್ತೊಂದು ಪ್ರಕರಣವನ್ನು ನೋಂದಾಯಿಸಲಾಗಿತ್ತು. ಈ ಪ್ರಕರಣದಲ್ಲಿನ ತನಿಖೆಯಿಂದ ಒಂದು ತೀರ್ಮಾನಕ್ಕೆ ಬರಲಾಗಿದ್ದು, ಆರೋಪ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ ಹಾಗೂ ಇದು

ಸಿ.ಸಿ. ಸಂಖ್ಯೆ 7358/2016ರಲ್ಲಿ ಇತ್ಯರ್ಥದಲ್ಲಿದೆ ಎಂದು ಹೇಳಲಾಗುತ್ತಿದೆ. ಇದೇ ರೀತಿ, ಷೇರು ಪ್ರಮಾಣ ಪತ್ರ ಧಾರಕರ ಸೌಲಭ್ಯವಾಗಿರುವಂಥ ಪ್ರೀಮಿಯಂನ್ನು ಒಳಗೊಳ್ಳುವಂಥ ಅವಧಿಯ ತರುವಾಯ ಕೇವಲ ಠೇವಣಿಗಳು ಹಾಗೂ ಷೇರು ಪ್ರಮಾಣಪತ್ರಗಳನ್ನು ಸ್ವೀಕರಿಸುವುದಕ್ಕೆ ಬದಲಾಗಿ ಷೇರು ಪ್ರಮಾಣಪತ್ರಗಳನ್ನು ನೀಡಿರುವೆಡೆಗಳಲ್ಲಿ, ಇಂಥ ಹೂಡಿಕೆಗಳನ್ನು ಮಾಡಬೇಕೆಂದು ಕೋರುವ ಮೂಲಕ ಕೂಡ ಮತ್ತೊಂದು ರೀತಿಯಲ್ಲಿ ಅಂಥ ಠೇವಣಿಗಳ ಸಂಬಂಧವಾಗಿ ಅರ್ಜಿದಾರರ ವಿರುದ್ಧ ಹಲವಾರು ಪ್ರಕರಣಗಳನ್ನು ಸರಣಿಯೋಪಾದಿಯಲ್ಲಿ ದಾಖಲಿಸಲಾಗಿರುತ್ತದೆ. ಈ ಷೇರು ಪ್ರಮಾಣಪತ್ರಗಳು ಅರ್ಜಿದಾರರ ಹೆಸರಿನಲ್ಲಿವೆ ಇಲ್ಲವೇ ಅಂಥ ಹೂಡಿಕೆ ಮಾಡಿದಂಥ ವ್ಯಕ್ತಿಗಳ ಹೆಸರಿನಲ್ಲಿರುತ್ತವೆ. ಸದರಿ ಅರ್ಜಿದಾರರ ವಿರುದ್ಧ ಏನೇ ಇದ್ದರೂ ಹೆಚ್ಚಿನ ಸಂಖ್ಯೆಯ ಪ್ರಕರಣಗಳನ್ನು ನೋಂದಾಯಿಸಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ಬ್ಯಾಂಕು ಒಳಗೊಂಡ ತದ್ರೂಪದ ವ್ಯವಹರಣೆಗಳ ಸಂಬಂಧದಲ್ಲಿ, ಅದೇ ರೀತಿಯದೆಂದು ಆಪಾದಿಸಲಾದ ಕಾರ್ಯನೀತಿಯ ಸಂಬಂಧದಲ್ಲಿ ಅರ್ಜಿದಾರನು ಈ ನ್ಯಾಯಾಲಯದ ಮುಂದೆ ಬಂದಿರುತ್ತಾನೆ.

4. ಈ ಎಲ್ಲಾ ಪ್ರಕರಣಗಳಲ್ಲಿ ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಅಮರ್ ಕೊರೆಯಾ ರವರು ಸದರಿ ವ್ಯವಹರಣೆಗೆ ಸಂಬಂಧಿಸುವ ಇಂಥ ಸರಣಿ ಪ್ರಕರಣಗಳಲ್ಲಿ ಕಾನೂನಿನ ಅನುಸಾರ ಹಾಗೂ ಈ ಪ್ರಕರಣಗಳು ನಿರತವಾಗಬೇಕಾದಂಥ ಹಾಗೂ ಕ್ರಮ ಜರುಗಿಸಬೇಕಾದಂಥ ರೀತಿಯು ಇತ್ಯರ್ಥಗೊಂಡಿರುತ್ತದೆ. ಇವರು ಈ ಸಂಬಂಧವಾಗಿ ***ಟಿ.ಟಿ. ಆಂಟೋನಿ –ವಿರುದ್ಧ– ಕೇರಳ ಸರ್ಕಾರ ಮತ್ತು ಇತರರು***[1] ಮತ್ತು ***ಅಮಿತ್‌ಭಾಯ್ ಅನಿಲ್ ಚಂದ್ರ ಷಾ –ವಿರುದ್ಧ– ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ ಹಾಗೂ ಮತ್ತೊಬ್ಬರು***[2] ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ. ಅಲ್ಲದೆ, ***ನಿಂಗಪ್ಪ ಪರಸಪ್ಪ ಪೂಜಾರಿ ಹಾಗೂ ಇತರರು –ವಿರುದ್ಧ– ಕರ್ನಾಟಕ ಸರ್ಕಾರ***[3], ಪ್ರಕರಣದಲ್ಲಿ ಕೂಡ ಸಂಖ್ಯೆ ಎಲ್ ಮತ್ತು ಒ/ಎಂಐಎಸ್‌ಸಿ/24/2015–16ನ್ನು ಹೊಂದಿರುವ 30.07.2015ರಂದು ರಾಜ್ಯ ಸರ್ಕಾರವು

1. (2001) 6 ಎಸ್‌ಸಿಸಿ 181
2. (2013) 6 ಎಸ್‌ಸಿಸಿ 348
3. 2012(3) ಕೆಸಿಸಿಆರ್ 1734

ಹೊರಡಿಸಿದ ಸುತ್ತೋಲೆಗೆ ಸಂಬಂಧಿಸಿದಂತೆ ಅದರ ಆಧಾರದ ಮೇಲೆ ರೂಪಿಸಿದಂಥ 05.03.2015ರಂದು ಕಲ್ಬುರ್ಗಿ ಪೀಠದ ಎದುರು ನಿರ್ಧರಿಸಿದ ***ಮಲ್ಲು –ವಿರುದ್ಧ – ಕರ್ನಾಟಕ ರಾಜ್ಯ***[4], ಹಾಗೂ ತತ್ಸಂಬಧಿ ಪ್ರಕರಣಗಳಲ್ಲಿ ಕ್ರಿಮಿನಲ್ ಅರ್ಜಿ ಸಂಖ್ಯೆ 201108/2014ರಲ್ಲಿ ಈ ನ್ಯಾಯಾಲಯವು ಇದನ್ನು ಉಲ್ಲೇಖಿಸಿರುತ್ತದೆ ಹಾಗೂ ಉದಾಹರಿಸಿರುತ್ತದೆ. ಇದರ ವಸ್ತುವಿಷಯವು ವ್ಯವಹರಣೆಯ ಸಾಮಾನ್ಯ ರೀತಿಯಲ್ಲಿ ದಾಖಲಾದ ಪ್ರಕರಣಗಳನ್ನು ಕಟ್ಟುನಿಟ್ಟಾಗಿ ತನಿಖೆ ಮಾಡುವಾಗ ತನಿಖಾಧಿಕಾರಿಗಳು ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರಗಳಾಗಿರುತ್ತದೆ ಹಾಗೂ ಸುತ್ತೋಲೆಗೆ ಸಂಬಂಧಿಸಿದ ಪ್ರೇರಣೆಯು, ಈ ಮೇಲೆ ಉಲ್ಲೇಖಿಸಿದ ಅಂದರೆ ಕ್ರಿಮಿನಲ್ ಅರ್ಜಿ ಸಂಖ್ಯೆ 201108/2014 ಎಂಬ ಕ್ರಿಮಿನಲ್ ಅರ್ಜಿಯಾಗಿರುತ್ತದೆ. ಕಾನೂನಿನ ತತ್ವಗಳು ಇಂಥ ಪ್ರಕರಣಗಳ ಸಂಬಂಧದಲ್ಲಿ ಇತ್ಯರ್ಥಗೊಂಡಿರುತ್ತವೆ ಹಾಗೂ ಅವುಗಳನ್ನು ಅಧಿವಿಚಾರಿಸಬೇಕಾದ ರೀತಿಯನ್ನು, ಈ ಮುಂದಿನಂತೆ ***ಟಿ.ಟಿ. ಆ್ಯಂಟನಿ*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿರುತ್ತದೆ.

> *"19.ದಂಡ ಪ್ರಕ್ರಿಯಾ ಸಂಹಿತೆಯ ಯೋಜನೆಯ ಪ್ರಕಾರ ಅಪರಾಧವು ಯಾವ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಜರುಗುತ್ತದೋ ಅಂಥ ಪೊಲೀಸ್ ಠಾಣೆಯ ದಂಡ ಪ್ರಕ್ರಿಯಾ ಸಂಹಿತೆಯ 156 ಅಥವಾ 157ನೇ ಪ್ರಕರಣಗಳಲ್ಲಿ ಉಪಬಂಧಿಸಿದಂತೆ ತನಿಖೆಯನ್ನು ಆರಂಭಿಸಬೇಕಾಗಿರುತ್ತದೆ. ಪ್ರಥಮ ಮಾಹಿತಿ ವರದಿಯ, ನಮೂದಿನ ಆಧಾರದ ಮೇಲೆ ಸಂಜ್ಞೇಯ ಅಪರಾಧ ಎಸಗಿರುವುದು ಕಂಡುಬರುತ್ತದೆ. ತನಿಖೆಯು ಪೂರ್ಣಗೊಂಡ ಮೇಲೆ, ಸಂಗ್ರಹಿಸಲಾದ ಸಾಕ್ಷ್ಯದ ಆಧಾರದ ಮೇಲೆ, ಸಂದರ್ಭಾನುಸಾರ ದಂಡ ಪ್ರಕ್ರಿಯಾ ಸಂಹಿತೆಯ 169 ಅಥವಾ 170ನೇ ಪ್ರಕರಣಗಳಡಿಯಲ್ಲಿ ಅಭಿಪ್ರಾಯಗಳನ್ನು ರೂಪಿಸಬೇಕಾಗುತ್ತದೆ ಹಾಗೂ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 173(2)ನೇ ಪ್ರಕರಣದಡಿಯಲ್ಲಿ ಸಂಬಂಧಪಟ್ಟ ಮ್ಯಾಜಿಸ್ಟ್ರೇಟರಿಗೆ ತಮ್ಮ ವರದಿಯನ್ನು ಕಳುಹಿಸಬೇಕಾಗಿರುತ್ತದೆ.*

4. ಕ್ರಿ.ಅ. ಸಂ. 201108/2014, ದಿನಾಂಕ 5-3-2015.

*ಆದಾಗ್ಯೂ, ಅಂಥ ವರದಿಯನ್ನು ಸಲ್ಲಿಸಿದ ತರುವಾಯ, ಹೆಚ್ಚಿನ ಮಾಹಿತಿ ಅಥವಾ ವಿಷಯವನ್ನು ತಮ್ಮ ಸುಪರ್ದಿಗೆ ಬಂದಲ್ಲಿ, ಹೊಸ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸುವ ಅಗತ್ಯವಿರುವುದಿಲ್ಲ; ಸಾಮಾನ್ಯವಾಗಿ ನ್ಯಾಯಾಲಯದ ಅನುಮತಿಯ ಮೇರೆಗೆ ಹೆಚ್ಚಿನ ತನಿಖೆ ನಡೆಸಲು ಈತನನ್ನು ಅಧಿಕೃತಗೊಳಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸುವೆಡೆಯಲ್ಲಿ ಇವರು ಮೌಖಿಕ ಹಾಗೂ ದಸ್ತಾವೇಜೀಯವಾದ ಹೆಚ್ಚಿನ ಸಾಕ್ಷ್ಯವನ್ನು ಸಂಗ್ರಹಿಸಿ, ಇವರು ಒಂದು ಅಥವಾ ಹೆಚ್ಚಿನ ವರದಿಗಳನ್ನು ಕಳುಹಿಸಲು ಹೊಣೆಗಾರರಾಗಿರುತ್ತಾರೆ. ಇದು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173ನೇ ಪ್ರಕರಣದ (8)ನೇ ಉಪ-ಪ್ರಕರಣದ ಅರ್ಥವಾಗಿರುತ್ತದೆ.*

*20. ಮೇಲಿನದರ ಚರ್ಚೆಯು ಸಂಜ್ಞೇಯ ಅಪರಾಧ ಎಸಗಿರುವುದಕ್ಕೆ ಸಂಬಂಧಿಸಿದಂತೆ ಮುಂಚಿನ ಅಥವಾ ಪ್ರಥಮ ಮಾಹಿತಿ ವರದಿಯು ದಂಡ ಪ್ರಕ್ರಿಯಾ ಸಂಹಿತೆಯ 154ನೇ ಪ್ರಕರಣದ ಅಗತ್ಯತೆಗಳನ್ನು ಪೂರೈಸಿದಲ್ಲಿ ಮಾತ್ರ ಇದು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 154, 155, 156, 157, 162, 170 ಹಾಗೂ 173ನೇ ಪ್ರಕರಣಗಳ ಉಪಬಂಧಗಳ ಯೋಜನೆಯನ್ನೇ ಅನುಸರಿಸಿರುತ್ತದೆ. ಹಾಗಾಗಿ ಒಂದೇ /ಸಂಜ್ಞೇಯ ಅಪರಾಧಗಳ ಸಂಬಂಧದಲ್ಲಿ ಅಥವಾ ಸಂಜ್ಞೇಯ ಅಪರಾಧಗಳನ್ನು ಕುರಿತಂತೆ ಅಥವಾ ಸಂಜ್ಞೇಯ ಅಪರಾಧ ಅಥವಾ ಅಪರಾಧಗಳು ಘಟಿಸಲು ಒದಗುವ ಘಟನೆ ಕುರಿತಂತೆ ಪ್ರತಿಯೊಂದು ತರುವಾಯದ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಎರಡನೇ ಪ್ರಥಮ ಮಾಹಿತಿ ವರದಿ ಹಾಗೂ ತರುವಾಯದ ಹೊಸ ತನಿಖೆಯನ್ನು ಮಾಡಲಾಗುವುದಿಲ್ಲ ಹಾಗೂ ಠಾಣೆಯ ದಿನಚರಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ನಮೂದಿಸಿದ ಮೇಲೆ, ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು, ಪ್ರಥಮ ಮಾಹಿತಿ ವರದಿಯಲ್ಲಿ ವರದಿ ಮಾಡಿದ ಕೇವಲ ಸಂಜ್ಞೇಯ ಅಪರಾಧವನ್ನು ಮಾತ್ರವಲ್ಲದೆ ಅದೇ ಸಮಯದಲ್ಲಿ ಅಥವಾ ಅದೇ*

*ಸಂದರ್ಭದಲ್ಲಿ ಎಸಗಲಾಗಿದೆ ಎಂದು ಕಂಡುಬರುವ ಎತರೆ ತತ್ಸಂಬಂಧಿತ ಅಪರಾಧಗಳನ್ನು ಸಹ ತನಿಖೆ ಮಾಡಬೇಕು ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 173ನೇ ಪ್ರಕರಣದಲ್ಲಿ ಉಪಬಂಧಿಸಲಾದಂಥ ಒಂದು ಅಥವಾ ಹೆಚ್ಚಿನ ವರದಿಯನ್ನು ದಾಖಲು ಮಾಡಬೇಕು".*

5. ಮೇಲಿನ ಉದ್ಧೃತ ಭಾಗಗಳು, ತನಿಖಾಧಿಕಾರಿಗಳು, ಸಂಜ್ಞೇಯ ಅಪರಾಧಗಳನ್ನು ಮಾಡಿರುವುದಕ್ಕೆ ಸಂಬಂಧಿಸಿದಂತೆ ಪ್ರಥಮ ಮಾಹಿತಿ ವರದಿಯನ್ನು ಎಷ್ಟು ಬೇಗ ಸ್ವೀಕರಿಸುತ್ತಾನೋ ಅಷ್ಟು ಬೇಗ, ಆತ ವಿಷಯದ ತನಿಖೆಯನ್ನು ಕೈಗೊಳ್ಳಬೇಕೆಂಬುದನ್ನು ಸ್ಪಷ್ಟಗೊಳಿಸುತ್ತವೆ. ಯಾವುದೇ ಇಂಥದೇ ಘಟನೆಗೆ ಹೊರತುಪಡಿಸಿದ ಯಾವುದೇ ಘಟನೆಯ ಸಂಬಂಧದೊಂದಿಗೆ ಅಥವಾ ಇಂಥದೇ ವ್ಯವಹರಣೆಯನ್ನು ಹೊರತುಪಡಿಸಿದ ಯಾವುದೇ ಘಟನೆಯ ಸಂಬಂಧದೊಂದಿಗೆ ಯಾವುದೇ ತರುವಾಯದ ಮಾಹಿತಿಯನ್ನು ಈತ ಸ್ವೀಕರಿಸಿದರೆ, ಈತ ಹೆಚ್ಚಿನ ಅಪರಾಧಗಳ ಸಂಖ್ಯೆಯನ್ನು ನೋಂದಾಯಿಸತಕ್ಕದ್ದಲ್ಲ. ಆದರೆ ಈತ ಅದನ್ನು ದಂಡ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣದಡಿಯಲ್ಲಾಗಲೀ ಅಥವಾ ದಂಡ ಪ್ರಕ್ರಿಯ ಸಂಹಿತೆಯ 161ನೇ ಪ್ರಕರಣದಡಿಯಾಗಲೀ ಸಾಕ್ಷಿದಾರನ ಹೇಳಿಕೆಯಾಗಿರುವಂಥ ಮಾಹಿತಿಯೆಂದು ಪರಿಗಣಿಸಬೇಕಾಗುತ್ತದೆ. ಈತ ಯಾವುದೇ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲು, ಸಾಕ್ಷಿದಾರನ ಯಾವುದೇ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲು ಅಥವಾ ಅಂಥ ಪ್ರಕರಣದೊಂದಿಗೆ ಸಂಬಂಧ ಹೊಂದಿರುವಂಥ ಸಾಕ್ಷಿದಾರರನ್ನು ಪರೀಕ್ಷಿಸುವ ಮೂಲಕ ಹೊರನೋಟಕ್ಕೆ ತಪ್ಪಿತಸ್ಥರೆಂದು ಯಾರ ಹೆಸರುಗಳನ್ನು ಪಟ್ಟಿ ಮಾಡಲಾಗಿರುತ್ತದೋ ಅಂಥ ಯಾರೇ ತಪ್ಪಿತಸ್ಥ ವ್ಯಕ್ತಿಗಳನ್ನು ದಸ್ತಗಿರಿ ಮಾಡುವ ಅಧಿಕಾರವನ್ನು ಹೊಂದಿರುತ್ತಾನೆ. ಅಂತಿಮವಾಗಿ, ಈತ ಇಡೀ ತನಿಖಾ ಕಾಗದ ಪತ್ರಗಳನ್ನು ಸರಿಯಾಗಿದೆಯೇ ಎಂದು ತಾಳೆ ನೋಡಿ, ಬೇರೆ ಬೇರೆ ಸಮಯದಲ್ಲಿ, ಬೇರೆ ಬೇರೆ ವ್ಯಕ್ತಿಗಳು ಒಳಗೊಂಡಿದ್ದಾಗ್ಯೂ, ಒಂದೇ ವ್ಯವಹರಣೆಯನ್ನು ಕೈಗೊಳ್ಳಲು ಸಂಬಂಧಿಸಿದ ವಿಷಯವನ್ನು ಸಾಕ್ಷಿದಾರರ ಹೇಳಿಕೆಯೊಂದಿಗೆ ಹೋಲಿಸಿ ಸರಿ–ತಪ್ಪನ್ನು ನೋಡಿ ಇಡೀ ಘಟನೆಯನ್ನು ಇದು ಹೀಗೆ ಎಂದು ಖಚಿತಪಡಿಸಿಕೊಳ್ಳುವ ತೀರ್ಮಾನಕ್ಕೆ ಬರಬೇಕಾಗಿರುತ್ತದೆ. ಇದು

ಸಾರಾಭೂತವಾದ ಸಂದರ್ಭಗಳ ಸಾರಾಂಶವಾಗಿದ್ದು, ತನಿಖಾಧಿಕಾರಿಗಳು ನ್ಯಾಯಾಲಯದ ಎಲ್ಲಾ ತನಿಖಾ ಸಾಮಗ್ರಿಗಳು ಅಡಕವಾಗಿರುವ ಸಮಗ್ರ ಸಾಮಾನ್ಯ ಅಥವಾ ಏಕ ಆರೋಪ ಪಟ್ಟಿಯನ್ನು ದಾಖಲು ಮಾಡುವ ನಿರ್ಧಾರ ತೆಗೆದುಕೊಳ್ಳಬೇಕಾಗಿರುತ್ತದೆ.

6. ಪ್ರಸ್ತುತ ಪ್ರಕರಣಗಳು, ಸಾಮಾನ್ಯ ಆರೋಪ ಪಟ್ಟಿಯನ್ನು ಸಲ್ಲಿಸಲೇಬೇಕೆಂಬಂಥ ಸ್ಪಷ್ಟ ಸ್ವರೂಪದಲ್ಲಿವೆ. ಅಂತೆಯೇ ***ಅಮಿತ್ ಬಾಯಿ ಅನಿಲ್ ಚಂದ್ರ ಷಾ*** ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಅನುಸರಿಸಬೇಕಾದ ಕಾರ್ಯ ವಿಧಾನವನ್ನು ಪುನರುಚ್ಚರಿಸಿ, ಹಲವಾರು ಪ್ರಥಮ ಮಾಹಿತಿ ವರದಿ ಸೃಷ್ಟಿಯಾಗುವ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಪರೀಕ್ಷಿಸುವುದಕ್ಕೆ ಸಂಬಂಧಿಸಿದಂತೆ ಹಾಗೂ ಹಲವಾರು ಪ್ರಕರಣಗಳು ಒಂದೇ ವ್ಯವಹರಣೆಯ ಸಂಬಂಧದಲ್ಲಿ ಒಂದೇ ಘಟನೆಗೆ ಸಂಬಂಧಿಸಿದಂತೆ ಅವುಗಳಲ್ಲಿರುವ ಸಾದೃಶ್ಯತೆಯನ್ನು ಪರೀಕ್ಷಿಸುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳಿಗೆ ಎಚ್ಚರಿಕೆಯನ್ನು ನೀಡಿರುತ್ತದೆ. ಇದು, ***ಟಿ.ಟಿ. ಆ್ಯಂಟನಿ*** ಪ್ರಕರಣದಲ್ಲಿ ಸಹ ಈ ಮುಂದಿನಂತಿರುತ್ತದೆ:

> *"ಆದಾಗ್ಯೂ, ತನಿಖೆಯ ಸಂಪೂರ್ಣ ಅಧಿಕಾರವು, ದಂಡ ಪ್ರಕ್ರಿಯಾ ಸಂಹಿತೆಯ 173(2) ಪ್ರಕರಣದಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸುವುದಕ್ಕೆ ಮೊದಲಾಗಲೀ ಅಥವಾ ತರುವಾಯವಾಗಲೀ ಅನುಕ್ರಮದ ಪ್ರಥಮ ಮಾಹಿತಿ ವರದಿಗಳನ್ನು ಸಲ್ಲಿಸಿದ ಮೇಲೆ ಒಂದು ಅಥವಾ ಹೆಚ್ಚಿನ ಸಂಖ್ಯೆಯ ಅಪರಾಧಗಳು ನಡೆಯಲು ಅವಕಾಶ ಉದ್ಭವಿಸುವ ಸಂದರ್ಭದಲ್ಲಿ ಪೊಲೀಸರು ಹೊಸದಾಗಿ ತನಿಖೆ ಮಾಡುವ ಪ್ರತೀ ಸಮಯದಲ್ಲೂ, ನಾಗರಿಕರನ್ನು ತನಿಖೆಗೆ ಒಳಪಡಿಸುವಿಕೆಯನ್ನು ಸಮರ್ಥಿಸುವುದಿಲ್ಲ. ಇದು, ದಂಡ ಪ್ರಕ್ರಿಯಾ ಸಂಹಿತೆಯ 154 ಹಾಗೂ 156ನೇ ಪ್ರಕರಣಗಳ ವ್ಯಾಪ್ತಿಯನ್ನು ಮೀರಿ, ನೀಡಲಾದ ಪ್ರಕರಣದಲ್ಲಿನ ತನಿಖೆಯ ಶಾಸನಾತ್ಮಕ ಅಧಿಕಾರದ ದುರುಪಯೋಗದ ಪ್ರಕರಣವಾಗಿರಬಹುದು. ಎರಡನೇ ಅಥವಾ ಅನುಕ್ರಮದ ಪ್ರಥಮ ಮಾಹಿತಿ ವರದಿಗಳನ್ನು ಆಧರಿಸಿದ*

> *ಹೊಸ ತನಿಖೆ ಮಾಡಿರುವ ಪ್ರಕರಣದ, ಒಂದೇ ವ್ಯವಹರಣೆಯ ಕ್ರಮದಲ್ಲಿ ಮಾಡಲಾಗಿದೆಯೆಂದು ಆಪಾದಿಸಲಾದ ಸದರಿ ಅಥವಾ ಸಂಬಂಧಪಟ್ಟ ಸಂಜ್ಞೇಯ ಅಪರಾಧದೊಂದಿಗಿನ ಸಂಬಂಧದಲ್ಲಿ ಸಲ್ಲಿಸಿದ ಪ್ರತೀ ಪ್ರಕರಣವಾಗಿರದ ಹಿನ್ನೆಲೆಯಲ್ಲಿ ತನಿಖೆಯು ನಡೆಯುತ್ತಿರಲಿ ಅಥವಾ ಅಂತಿಮ ವರದಿ ಮೊದಲ ಪ್ರಥಮ ಮಾಹಿತಿ ವರದಿಯ್ನನು ಅನುಸರಿಸುವ ಸಂಬಂಧದಲ್ಲಿ ತನಿಖೆಯು ನಡೆಯುತ್ತಿರಲಿ ಇಲ್ಲವೇ 173(2) ಪ್ರಕರಣದಡಿಯಲ್ಲಿ ಅಂತಿಮ ವರದಿಯನ್ನು ಮ್ಯಾಜಿಸ್ಟ್ರೇಟರಿಗೆ ಕಳುಹಿಸಿರಲಿ, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ಅಥವಾ ಸಂವಿಧಾನದ 226/227ನೇ ಅನುಚ್ಛೇದದಡಿಯಲ್ಲಿ ಅಧಿಕಾರ ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಇದು ಯುಕ್ತವಾದ ಪ್ರಕರಣವಾಗಿರಬಹುದು".*

ಹಾಗೂ ಸಂದರ್ಭಾನುಸಾರ ದಂಡ ಪ್ರಕ್ರಿಯಾ ಸಂಹಿತೆಯ 169 ಹಾಗೂ 170ನೇ ಪ್ರಕರಣದಡಿಯಲ್ಲಿ ಅಭಿಪ್ರಾಯವನ್ನು ರೂಪಿಸಿ ಅದಕ್ಕೆ ಪೂರಕವಾಗಿ ತನಿಖೆಯನ್ನು ಮುನ್ನೆಲೆಗೆ ತರಲು, ಸತ್ಯವನ್ನು ಖಚಿತಪಡಿಸಿಕೊಳ್ಳಲು ಹಾಗೂ ವಾಸ್ತವಾಂಶಗಳನ್ನು ಸರಿಪಡಿಸಲು, ಸಾಕ್ಷ್ಯವನ್ನು ಸಂಗ್ರಹಿಸಲು ನ್ಯಾಯಾಲಯಗಳಿಗೆ ಸಂಬಂಧಿಸಿದ ನಿರ್ಣಯಗಳು ಹಾಗೂ ಮುಖ್ಯಾಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಲೇಬೇಕೆಂಬ ಸರಿಯಾದ ಕ್ರಮವನ್ನು ನ್ಯಾಯಾಲಯಕ್ಕೆ ಸೂಚಿಸಲಾಗಿರುತ್ತದೆ ಹಾಗೂ ಸಂಬಂಧಪಟ್ಟ ಮ್ಯಾಜಿಸ್ಟ್ರೇಟರಿಗೆ ದಂಡ ಪ್ರಕ್ರಿಯಾ ಸಂಹಿತೆಯ 173 (2)ನೇ ಪ್ರಕರಣ ಹಾಗೂ 173(8)ನೇ ಪ್ರಕರಣಗಳಡಿಯಲ್ಲಿ ವರದಿಯನ್ನು ಕಳುಹಿಸಲಾಗಿದೆ.

7. ವಾಸ್ತವಾಂಶದ ಹಿನ್ನೆಲೆಯಲ್ಲಿ, ಈ ಪ್ರಕರಣಗಳನ್ನು ಕಾಲಾವಧಿ ಮೀರಿ ಸಲ್ಲಿಸಲಾಗಿದ್ದು, ಇವು ಹಲವಾರು ಹಂತಗಳಲ್ಲಿ ಇತ್ಯರ್ಥದಲ್ಲಿವೆ ಹಾಗೂ ಕೆಲವು ಪ್ರಕರಣಗಳಲ್ಲಿ ಆರೋಪ ಪಟ್ಟಿಗಳನ್ನು ಸಲ್ಲಿಸಲಾಗಿದ್ದು, ಇದು ಚಾಲ್ತಿಯಲ್ಲಿರುವಂಥ ಮೊದಲ ಆರೋಪ ಪಟ್ಟಿಯಾಗಿದ್ದು, ಸರಿಯಾದ ಕ್ರಮವನ್ನು ***ಅಮಿತ್ ಷಾ*** ಪ್ರಕರಣದಲ್ಲಿ ವಿಧಿಸಲಾದಂತೆ ಅಳವಡಿಕೊಳ್ಳಬೇಕಾಗಿರುತ್ತದೆ. ಸದರಿ ಅರ್ಜಿದಾರರನ್ನು ಒಳಗೊಂಡ ಸಾದೃಶ ವ್ಯವಹರಣೆಗಳ ಸಂಬಂಧದಲ್ಲಿ ತರುವಾಯದ ಆರೋಪಪಟ್ಟಿಗಳನ್ನು

ಪೂರಕ ಆರೋಪಪಟ್ಟಿಗಳಂತೆ ಪರಿಗಣಿಸಬೇಕಾಗಿರುತ್ತದೆ ಹಾಗೂ ಪ್ರಥಮ ಮಾಹಿತಿ ವರದಿಯನ್ನು ಹೆಚ್ಚುವರಿ ವಿವರಪಟ್ಟಿಗಳೆಂದು ಪರಿಗಣಿಸಬೇಕಾಗುತ್ತದೆ.

8. ಅರ್ಜಿದಾರರ ಪರ ಮಾನ್ಯ ವಕೀಲರು, ಪ್ರಕರಣದ ಆರಂಭದಲ್ಲಿ ಅರ್ಜಿದಾರರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು, ಪ್ರಸ್ತುತ ಇದನ್ನು ಸಿ.ಸಿ.ಸಂಖ್ಯೆ 7358/2016 ಎಂದು ನೋಂದಾಯಿಸಲಾಗಿರುತ್ತದೆ ಹಾಗೂ ಈ ಅರ್ಜಿಗಳ ವಸ್ತು ವಿಷಯುವಾಗಿರುವಂಥ ಎಲ್ಲಾ ಇತರೆ ಪ್ರಕರಣಗಳು ತರುವಾಯುದ ವಿಷಯಗಳಾಗಿರುತ್ತದೆ. ಆದ್ದರಿಂದ, ಅರ್ಜಿಗಳನ್ನು ಅಂಗೀಕರಿಸಿ, ಸಲ್ಲಿಸಿದ ಆರೋಪಪಟ್ಟಿಗಳನ್ನು ರದ್ದುಪಡಿಸುವುದು ವಿವೇಕಯುತವಾದುದಾಗಿರುತ್ತದೆ ಹಾಗೂ ಪ್ರಸ್ತುತ ಪ್ರತೀ ಪ್ರಕರಣಗಳಲ್ಲಿನ ಸಂಬಂಧಪಟ್ಟ ಪ್ರಥಮ ಮಾಹಿತಿ ವರದಿಗಳನ್ನು ಹೆಚ್ಚುವರಿ ಮಾಹಿತಿಯೆಂದು ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದಡಿಯಲ್ಲಿನ ವಿವರಪಟ್ಟಿಗಳೆಂದು ಪರಿಗಣಿಸತಕ್ಕದ್ದು ಹಾಗೂ ಸ್ವತಂತ್ರ ಪ್ರಕರಣಗಳಲ್ಲಿ ಅವಶ್ಯಕವಾಗಿ ಸಲ್ಲಿಸಿದಂಥ ಆರೋಪಟ್ಟಿಗಳನ್ನು, ಪೂರಕ ಆರೋಪ ಪಟ್ಟಿಗಳಂತೆ ಸಲ್ಲಿಸಬೇಕು ಹಾಗೂ ಈ ಎಲ್ಲಾ ಪ್ರಕರಣಗಳನ್ನು ಸಿ.ಸಿ.ಸಂಖ್ಯೆ 7358/2016 ಇದರೊಟ್ಟಿಗೆ ಅಧಿವಿಚಾರಿಸತಕ್ಕದ್ದು ಎಂದು ವಾದಿಸಿರುತ್ತಾರೆ.

9. ಎರಡನೇ ಹಾಗೂ ಅನುಕ್ರಮದ ಪ್ರಥಮ ಮಾಹಿತಿ ವರದಿಗಳನ್ನು ಆಧರಿಸಿದ ಹೊಸ ತನಿಖೆಯ ಪ್ರಕರಣವು ಒಂದೇ ವ್ಯವಹರಣೆಯ ಸಂದರ್ಭದಲ್ಲಿ ಎಸಗಲಾಗಿದೆಯೆಂದು ಆಪಾದಿಸಲಾದ ಸಾದೃಶ ಅಥವಾ ಸಂಬಂಧಪಟ್ಟ ಸಂಜ್ಞೇಯ ಅಪರಾಧಗಳೊಂದಿಗಿನ ಸಂಬಂಧದಲ್ಲಿ ಸಲ್ಲಿಸಿದ ಪ್ರತಿ ಪ್ರಕರಣವಾಗುವಂತಿಲ್ಲವೆಂಬುದು ಅವಶ್ಯಕವಾಗಿರುತ್ತದೆ ಹಾಗೂ ಮೊದಲ ಪ್ರಥಮ ಮಾಹಿತಿ ವರದಿಯನ್ನು ಅನುಸರಿಸಿ ತನಿಖೆಯನ್ನು ಮಾಡುತ್ತಿರುವಲ್ಲಿ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 173(2) ಪ್ರಕರಣದಡಿಯಲ್ಲಿ ಪ್ರಮುಖವಾದ ವರದಿಯನ್ನು ಮ್ಯಾಜಿಸ್ಟ್ರೇಟರಿಗೆ ಕಳುಹಿಸಿದ್ದಲ್ಲಿ, ಸರ್ವೋಚ್ಚ ನ್ಯಾಯಾಲಯವು ಹೇಳಲಾದಂತೆ 482ನೇ ಪ್ರಕರಣದಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಸದರಿ ತನಿಖಾ ವರದಿಯನ್ನು ರದ್ದುಪಡಿಸುವುದು ಈ ನ್ಯಾಯಾಲಯಕ್ಕೆ ಅವಶ್ಯಕವಾಗಿರುತ್ತದೆ. ತದನುಸಾರವಾಗಿ, ಮೇಲಿನ ಪ್ರಕರಣಗಳಲ್ಲಿ ಸಂಬಂಧಪಟ್ಟ

ಪ್ರಥಮ ಮಾಹಿತಿ ವರದಿಗಳು ಹಾಗೂ ಆರೋಪ ಪಟ್ಟಿಗಳನ್ನು ರದ್ದುಪಡಿಸಬೇಕೆಂಬುದನ್ನು ಎತ್ತಿ ಹಿಡಿಯಲಾಗಿದೆ.

10. ಸಂಬಂಧಪಟ್ಟ ತನಿಖಾಧಿಕಾರಿಗೆ, ಈ ಮೇಲೆ ನೀಡಿದ ನಿರ್ದೇಶನಗಳ ರೂಪದಲ್ಲಿ ಹಾಗೂ ನ್ಯಾಯಾಲಯದ ಮುಂದೆ ಸಲ್ಲಿಸಿದ ಆರೋಪಪಟ್ಟಿಗಳ ಮೂಲಕ ಮುಂದುವರೆಯತಕ್ಕಂಥ Iನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟಿನ್ ಮ್ಯಾಜಿಸ್ಟ್ರೇಟರ ಕಡತದ ಮೇಲೆ ಸಿ.ಸಿ.ಸಂಖ್ಯೆ 7358/2016 ಅಂದರೆ ಅರ್ಜಿದಾರರ ವಿರುದ್ಧ ಆರಂಭಿಸಿದಂಥ ಪ್ರಕರಣದಲ್ಲಿ ತನಿಖಾಧಿಕಾರಿಗಳಿಗೆ ಇದನ್ನು ಹಸ್ತಾಂತರಿಸತಕ್ಕಂಥ ಸಂಬಂಧಪಟ್ಟ ತನಿಖಾಧಿಕಾರಿಗಳಿಗೆ ಆರೋಪಪಟ್ಟಿಯನ್ನು ಸಲ್ಲಿಸತಕ್ಕಂಥ ಅಧೀನ ನ್ಯಾಯಾಲಯಕ್ಕೆ ಬರಲು ಪ್ರತೀ ಪ್ರಕರಣಗಳಲ್ಲಿ ಒಳಗೊಳ್ಳುವ ಅವಶ್ಯಕತೆ ಇರುತ್ತದೆ. ಪ್ರತೀ ಪ್ರಕರಣಕ್ಕೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಒಂದೇ ಪ್ರಕರಣವೆಂದು ಅಧಿವಿಚಾರಿಸತಕ್ಕಂಥ ಮೇಲೆ ಹೇಳಿದ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು.